**CC 1339/2021**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1339/2021**

**ಡಿ ಡಬ್ಲೂ - 1**

**ಸಾಕ್ಷಿಯ ಹೆಸರು - ಪ್ರವೀಣ ಯಶಸ್**
**ತಂದೆಯ ಹೆಸರು - ಬಿ ಪಿ ಬೆಟ್ಟಸ್ವಾಮಿ**
**ವಯಸ್ಸು - 39 ವರ್ಷಗಳು**
**ಉದ್ಯೋಗ - ಗುತ್ತಿಗೆದಾರ**
**ವಾಸಸ್ಥಳ - ಬೆಂಗಳೂರು**

**ಸಾಕ್ಷಿಯನ್ನು ದಿನಾಂಕಃ 10-06-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಡಿ ಪಿ.,ವಕೀಲರಿಂದ**

ನನಗೆ ಪಿರ್ಯಾದುದಾರ ಸತ್ಯನಾರಾಯಣ ಮತ್ತು ವಿಶ್ವನಾಥ ತಂದೆ ಹೊನ್ನೂರಪ್ಪ ಎಂಬುವವರಿಂದ ನಾನು ರೂ. 72 ಲಕ್ಷ ಗಳಿಗೆ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಒಂದು ನಿವೇಶನವನ್ನು ಖರೀದಿಸಿದ್ದೆ. ಸದರಿ ನಿವೇಶನವನ್ನು ಖರೀದಿಸಿದಾಗ ಆ ನಿವೇಶನಕ್ಕೆ ಸಂಬಂಧಿಸಿ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದು ಮತ್ತು ಆ ನಿವೇಶನ 195 ಅಡಿ ಕಡಿಮೆ ಅಳತೆಯದ್ದಿರುವುದು ನನಗೆ ಗೊತ್ತಾಯಿತು. ನಾನು ಪಿರ್ಯಾದುದಾರ ಸತ್ಯನಾರಾಯಣ ಮತ್ತು ವಿಶ್ವನಾಥ ರವರನ್ನು ಕರೆಯಿಸಿ ವ್ಯಾಜ್ಯ ಬಗೆಹರಿಸಿಕೊಡಿ ಎಂದು ಕೇಳಿದೆ. ಸದರಿಯವರು ವ್ಯಾಜ್ಯ ಬಗೆಹರಿಸಿಕೊಡುತ್ತೇವೆ, ಅದಕ್ಕೆ ಸಮಯ ಹಿಡಿಯುತ್ತದೆ ಎಂದು ಹೇಳಿ ನಿವೇಶನದ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ಹೇಳಿದರು. ನಾನು ಸದರಿಯವರಿಗೆ ನಿವೇಶನ ಖರೀದಿ ಮಾಡಲು ನೀಡಿದ್ದ ಹಣದ ಪೈಕಿ ಪಿರ್ಯಾದುದಾರ ರೂ. 11 ಲಕ್ಷ ಮತ್ತು ವಿಶ್ವನಾಥ ರೂ. 11 ಲಕ್ಷ ಗಳನ್ನು ನನ್ನ ಹೆಂಡತಿಯ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ.

ಸದರಿ ವಿಚಾರವನ್ನು ಮುಚ್ಚಿಡುವ ಉದ್ದೇಶದಿಂದ ಅವರುಗಳು ಆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಸದರಿಯವರು ಮೇಲೆ ಹೇಳಿದ ನಿವೇಶನವನ್ನು ನನಗೆ ನೋಂದಾಯಿತ ಕ್ರಯ ಪತ್ರದ ಅಡಿಯಲ್ಲಿ ಮಾರಾಟ ಮಾಡಿರುತ್ತಾರೆ. ಸದರಿಯವರು confirmation deed ಮಾಡಿಕೊಳ್ಳಲು 4-5 ತಿಂಗಳ ಸಮಯ ನಿಗದಿಪಡಿಸಿ, ನನಗೆ ಆಗಲೇ ಕ್ರಯ ಪತ್ರ ಬರೆದುಕೊಟ್ಟಿರುವುದರಿಂದ ಸದರಿ confirmation deed ಬರೆಸಿಕೊಳ್ಳಲು ಭದ್ರತೆಗಾಗಿ ನನ್ನ ಬಳಿ ರೂ. 11 ಲಕ್ಷಕ್ಕೆ ಒಂದು ಚೆಕ್ ನ್ನು ಪಿರ್ಯಾದುದಾರ ಮತ್ತು ನನ್ನ ಹೆಂಡತಿಯ ಬಳಿ ರೂ. 11 ಲಕ್ಷಕ್ಕೆ ಒಂದು ಚೆಕ್ ನ್ನು ವಿಶ್ವನಾಥ ರವರು ಪಡೆದಿರುತ್ತಾರೆ. ಸದರಿಯವರು ನನ್ನ ಮತ್ತು ನನ್ನ ಹೆಂಡತಿಯ ಬಳಿ ತಲಾ ಒಂದು ಖಾಲಿ ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಮೇಲೆ ಸಹಿ ಪಡೆದಿರುತ್ತಾರೆ.

4-5 ತಿಂಗಳ ನಂತರ ಪಿರ್ಯಾದುದಾರ ಮತ್ತು ವಿಶ್ವನಾಥ ಸದರಿ ನಿವೇಶನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರಲಿಲ್ಲ ಮತ್ತು ನನಗೆ confirmation deed ಮಾಡಿಕೊಡಲಿಲ್ಲ. ನಾನು ಸದರಿಯವರಿಗೆ ಸಾಕಷ್ಟು ಬಾರಿ ಕರೆ ಮಾಡಿದರೂ ಸಹ ಅವರು ನನಗೆ ಪ್ರತಿಕ್ರಿಯೆ ನೀಡಿರುವುದಿಲ್ಲ. ಸದರಿಯವರು ನಾನು ನೀಡಿದ್ದ ಚೆಕ್ ನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂದು ನನಗೆ ಮೊದಲೇ ಗೊತ್ತಾಗಿದ್ದರಿಂದ ನಾನು ನನ್ನ ವಕೀಲರ ಮೂಲಕ ಅವರಿಗೆ ನೋಟಿಸ್ ನ್ನು ನೀಡಿರುತ್ತೇನೆ. ಸದರಿ ನೋಟಿಸ್ ಪಿರ್ಯಾದುದಾರರಿಗೆ ಮತ್ತು ವಿಶ್ವನಾಥರವರಿಗೆ ತಲುಪಿರುತ್ತದೆ. ಈ ವಿಚಾರವಾಗಿ ನಾನು ಬೆಂಗಳೂರಿನ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದಿ ಸಂಖ್ಯೆ: 983/2022 ಎಂಬ ಪ್ರಕರಣ ದಾಖಲಿಸಿರುತ್ತೇನೆ.

ನಾನು ಪ್ರಕರಣದ ಪಿರ್ಯಾದುದಾರರ ಕಡೆಯಿಂದ ಯಾವುದೇ ರೀತಿಯಲ್ಲಿ ಸಾಲ ಪಡೆದಿಲ್ಲ. ವಿಶ್ವನಾಥ ರವರು ಇದೇ ವ್ಯವಹಾರಕ್ಕೆ ಸಂಬಂಧಿಸಿ ಹೊಸಪೇಟೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಇನ್ನೊಂದು ಪ್ರಕರಣವನ್ನು ನನ್ನ ಹೆಂಡತಿಯ ವಿರುದ್ದ ಸಲ್ಲಿಸಿ ನನಗೆ ಕಿರುಕುಳ ನೀಡುತ್ತಿದ್ದಾರೆ.

ಪಿ ಸಿ ಆರ್ **982/2022** ರಲ್ಲಿನ ದೂರು ಮತ್ತು ಆದೇಶ ಪುಟಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿಃ **1** ಮತ್ತು **2** ಎಂದು ಗುರುತಿಸಲಾಯಿತು. **Crl.R.P. 699/2023** ರಲ್ಲಿನ ಅರ್ಜಿ, ಆದೇಶ ಪುಟ ಮತ್ತು ತೀರ್ಪಿನ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿಃ **3** ರಿಂದ **5** ಎಂದು ಗುರುತಿಸಲಾಯಿತು. ಅಸಲು ದಾವೆ ಸಂಖ್ಯೆಃ **26143/2020** ರಲ್ಲಿನ ವಾದ ಪತ್ರ, ಆದೇಶ ಪುಟಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿಃ **6** ಮತ್ತು **7** ಎಂದು ಗುರುತಿಸಲಾಯಿತು. ದಿಃ **21-08-2020** ರ ಕರಾರು ಪತ್ರದ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿಃ **8** ಎಂದು ಗುರುತಿಸಲಾಯಿತು. ದಿಃ **25-09-2020** ರ ಕ್ರಯ ಪತ್ರದ ಯಥಾ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿಃ **9** ಎಂದು ಗುರುತಿಸಲಾಯಿತು. ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿಃ **10** ಎಂದು ಗುರುತಿಸಲಾಯಿತು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿಃ **11** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಎಂ ಜಿ ಆರ್., ವಕೀಲರಿಂದ**

**ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.